ಅಧ್ಯಕ್ಷರು : ನಾನು ಹೇಳುವಂಥಾದ್ದನ್ನು ಕೇಳಿ, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ತಾವು ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ರಸ್ತೆಗಳು ಹಾಳಾಗಿದೆ.

ಅಧ್ಯಕ್ಷರು : ನಾನು ರಸ್ತೆಗಳ ಬಗ್ಗೆಯೇ ಗಮನ ಸೆಳೆಯುವ ಸೂಚನೆಯಲ್ಲಿ ತೆಗೆದುಕೊಳ್ಳುತ್ತೇನೆ. ನೀವು ಈಗಲೇ ತೆಗೆದುಕೊಳ್ಳಬೇಕೆಂದು ಹೇಳಿದರೆ ಸರಿಯಲ್ಲ. ನಾನು ಇದಕ್ಕೂ ಅವಕಾಶವನ್ನು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ತಾವು ಇದಕ್ಕೆ ಈಗ ಅವಕಾಶವನ್ನು ಕೊಟ್ಟರೆ, ಅದಕ್ಕೆ ಒಂದು ವಿಶೇಷವಾದ ಗಂಭೀರತೆ ಇರುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತಾವು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಾದರೂ ಅವಕಾಶವನ್ನು ಕೊಡಿ. ನೀವು ಅದನ್ನು ಕನವರ್ಟ್ ಮಾಡಿ. ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ನೀವು ಈಗ ಇದನ್ನು ನಿಲುವಳಿ ಸೂಚನೆಯಲ್ಲಿ ಕೊಟ್ಟಿರುವಂಥಾದ್ದು, ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಅಂದರೂ ಈಗಲೇ ಕೊಡಿ ಎಂದು ಹೇಳುವುದು. ಇದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ. ನಾನು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ನಾನು ಈ ವಿಷಯಕ್ಕೆ ಅವಕಾಶವನ್ನು ಕೊಡುತ್ತೇನೆಂದು ಹೇಳಿದ ಮೇಲೆ, ನಾನು ಕೊಡುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ತಾವು ಯಾವ ನಿಯಮಾವಳಿಯಲ್ಲಿ ಎಂದು ಹೇಳಿದರೆ, ಆಗುತ್ತದೆ.

ಅಧ್ಯಕ್ಷರು : ಆಯಿತು, ಈಗ ಏನಾಗಿದೆಯೆಂದರೆ, ಯಾವುದೋ ರಸ್ತೆಗಳ ವಿಚಾರವನ್ನು ನೀವು ನಿಲುವಳಿ ಸೂಚನೆಯ ಮೂಲಕ ತರಬಹುದಾ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಯಾವುದೇ ಒಂದು ರಸ್ತೆ ಎಂದರೆ ಹೇಗೆ? ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ.

ಅಧ್ಯಕ್ಷರು : ಆಯಿತು, ನಾನು ಕೇಳುವಂಥಾದ್ದು ಅತ್ಯಂತ ಗಂಭೀರವಾದದ್ದು, ಇತ್ತೀಚೆಗೆ ನಡೆದಿರುವಂತಹ ಘಟನೆಗಳ ಬಗ್ಗೆ ತಾವು ನಿಲುವಳಿ ಸೂಚನೆಯನ್ನು ಕೇಳಬೇಕು. ಅದನ್ನು ಬಿಟ್ಟು this is not correct.

ನಾನು ಇದನ್ನು ಅಲೋ ಮಾಡುವುದಿಲ್ಲ, ಇನ್ನು ಬೇರೆಯದಕ್ಕೆ ಫಿಕ್ಸ್ ಅಪ್ ಮಾಡುತ್ತೇನೆ. ಈಗ ದಯಮಾಡಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ಮಾತನಾಡಿ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ, ತಮಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಸಹಕರಿಸಬೇಕು. ನಾನು ರೂಲ್ ೭೩ನಲ್ಲಿ ಗಮನ ಸೆಳೆಯುವ ಸೂಚನೆಯ ಮೇಲೆ ನಿಮಗೆ ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ರಸ್ತೆಗಳು ಯಾವುದೇ ಇರಬಹುದು ಜಿಲ್ಲಾ ರಸ್ತೆಗಳು ಇರಬಹುದು. ಎಲ್ಲಾ ರಸ್ತೆಗಳು ಹಾಳಾಗಿ ಹೋಗಿರುವಂತಹ, ಇಷ್ಟು ಗಂಭೀರವಾದ ವಿಷಯವನ್ನು ಸರ್ಕಾರವಂತೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ, ನಾವು ನಿಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು : ದಯಮಾಡಿ ತಾವು ಈ ರೀತಿ ಮಾಡುವುದು ಸರಿಯಲ್ಲ, ಈಗ ಅವಸರ ಅವಸರವಾಗಿ ಪ್ರಶ್ನೋತ್ತರವನ್ನು ಮುಗಿಸಿದ್ದೇನೆ. ನಾವು ಈ ರೀತಿ ಕಾಲ ವ್ಯಯ ಮಾಡುವುದು ಬೇಡ. ನಾನು ಅವಕಾಶವನ್ನು ಮಾಡಿಕೊಡುತ್ತೇನೆಂದು ..... ಯವರನ್ನು ಮಾತನಾಡಲು ಕರೆದಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ತಾವು ನಿಜವಾಗಿಯೂ ಕೂಡ ಸರಿಯಾದಂತಹ ಅಭಿಪ್ರಾಯವನ್ನು ಕೊಟ್ಟಿದ್ದೀರಿ. ಈಗ ೬೦ನೇ ನಿಯಮಾವಳಿಯ ಪ್ರಕಾರ, ಇವರು ನಿಲುವಳಿ ಸೂಚನೆಯಲ್ಲಿ ತರಲು ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಅದು ಅನುಕೂಲವಾಗುತ್ತದೆಂಬುದು ಅಲ್ಲ. ತಾವು ಕೂಡ ಅಪ್ಪಣೆ ಕೊಡಿಸಿದ್ದೀರಿ. ಇದನ್ನು ಬೇರೊಂದು ರೂಪದಲ್ಲಿ ಚರ್ಚೆ ತೆಗೆದುಕೊಳ್ಳಬಹುದೆಂದು ಹೇಳಿದ್ದೀರಿ. ಆ ದೃಷ್ಟಿಕೋನದಿಂದ, ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ತಿರಸ್ಕರಿಸಬೇಕು. ತಾವು ತಮಗೆ ವಿವೇಚನೆಗೆ ಬಿಟ್ಟಂತೆ, ಬೇರೆ ರೀತಿಯಲ್ಲಿ ಅದನ್ನು ಇವತ್ತು ಆಗಲಿ, ಅಥವಾ ನಾಳೆಯಾಗಲಿ, ಇದರ ಬಗ್ಗೆ ಚರ್ಚೆಯಾಗುವಂಥಾದ್ದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡಬೇಕು.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಸರ್ಕಾರ ಕೆಲಸ ಮಾಡುವುದಕ್ಕೆ ಆಗದೇ ಇರುವಂಥಾದ್ದಕ್ಕೆ, ನಿಯಮಾವಳಿ ರಕ್ಷಣೆಯನ್ನು ತೆಗೆದುಕೊಳ್ಳಬಾರದು.

ಅಧ್ಯಕ್ಷರು : ಈಗ ನಾನು ನೀವು ಕೊಟ್ಟಿರುವಂತಹ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೇನೆ. ನಾನು ನಿಮಗೆ ರೂಲ್ ೭೩ರಲ್ಲಿ ಮಾತನಾಡಲು ಅವಕಾಶವನ್ನು